

ಸಂಚಾರಕ್ಕೆ ಹೊರಡುವ ಮೊದಲು 'ಇಂಥಲ್ಲಿಗೆ ತಾನು ಹೋಗುತ್ತಿದ್ದೇನೆ ಎಂದು ಯಾವತ್ತೂ ತನ್ನ ತಾಯಿಗಾಗಲೀ, ನಮಗೆ ಗಂಡ ಹೆಂಡತಿಗಾಗಲೀ, ತನ್ನ ಗೆಳೆಯರಿಗಾಗಲೀ ತಿಳಿಸಿದವನೇ ಅಲ್ಲ ತಿರುಬೋಕಿ. ಆದರೆ ಹೋಗಿ ಮರಳಿ ಬಂದ ಮೇಲೆ ತಾನು ಹೋಗಿದ್ದ ಸ್ಥಳ, ಅಲ್ಲಿಯ ವಿಶೇಷಗಳು, ಜನರ ರೀತಿ ನೀತಿ ಇತ್ಯಾದಿಯಾಗಿ ತಾಸುಗಟ್ಟಲೆ ವಿವರ ಬಿಚ್ಚಿಡುತ್ತಿದ್ದ. ಹೋದದ್ದು ಪುಣ್ಯಕ್ಷೇತ್ರವೋ, ದೇವಾಯತನಗಳೋ ಆಗಿದ್ದರೆ ಅಲ್ಲಿಂದ ಪ್ರಸಾದಗಳನ್ನೂ ತರುತ್ತಿದ್ದ. ಇದು ಇಂಥಲ್ಲಿಯ ಪ್ರಸಾದ.., ಇದು ಇಂಥಲ್ಲಿ ಕೊಟ್ಟ ಲಡ್ಡು' ಎಂದು ಅವನ್ನು ನಮಗೆ ನೀಡುತ್ತಿದ್ದ. ಒಮ್ಮೆ ಹೀಗೆ ತಿರುಬೋಕಿ ಪ್ರವಾಸಕ್ಕೆ ಹೋಗಿದ್ದಾಗ ಅವನು ಪ್ರಯಾಣ ಮಾಡುತ್ತಿದ್ದ ರೈಲು ಹಳಿ ತಪ್ಪಿ ನೆಲಕ್ಕೆ ಉರುಳಿತು. ನೂರಾರು ಮಂದಿ ಪ್ರಾಣ ಕಳೆದುಕೊಂಡರು. ಅನುಸೂಯಾಳ ಪುಣ್ಯ: ಮಗ ಸಾಯಲಿಲ್ಲ. ಆದರೆ, ಅವನ ಬಲಗಾಲನ್ನು ಕತ್ತರಿಸಬೇಕಾಯಿತು.

ಇವನು ಸಂಚಾರ ಮಾಡಿದ್ದು ಸಾಕು ಎಂದು ದೇವರಿಗೆ ಅನ್ನಿಸಿತೋ ಏನೋ..ತಿರುಬೋಕಿಯನ್ನು ಕುಂಟನನ್ನಾಗಿಸಿದ!

ಒಂದು ದಿನ..

ರಾತ್ರಿ ಟಿ.ವಿ.ಯಲ್ಲಿ 'ಕೌನ್ ಬನೇಗಾ ಕರೋಡ್‌ಪತಿ' ನೋಡುತ್ತಾ ಕುಳಿತಿದ್ದೆ ನಾನು. ಕನ್ನಡ ನಾಡಿನ ಯುವತಿ ಹಾಟ್ ಸೀಟ್‌ನಲ್ಲಿ ಕುಳಿತಿದ್ದಳು. ನೋಡಲು ಚಂದವಾಗಿದ್ದಳು. ಐ.ಎ.ಎಸ್. ಮಾಡುತ್ತಿದ್ದೇನೆ ಎಂದಳು ಆ ಯುವತಿ. ಅಮಿತಾಭ್ ಜೀ ಕಂಪ್ಯೂಟರ್ ಸ್ಕ್ರೀನ್ ಮೂಲಕ ಕೇಳುತ್ತಿದ್ದ ಒಂದೊಂದೇ ಪ್ರಶ್ನೆಗೆ ತಪ್ಪಿಲ್ಲದೆ ಉತ್ತರಿಸುತ್ತಾ ಹೋದಳು.

ಗೆಲುವಿನ ಮೊತ್ತ ಸಾವಿರ ಸಾವಿರವಾಯಿತು. ಸಾವಿರ ದಾಟಿ ಲಕ್ಷಕ್ಕೆ ಏರಿತು. ಲಕ್ಷವನ್ನೂ ದಾಟಿ ಸಾಗಿತು. ನಡುವೆ ಒಂದೆರಡು ಲೈಫ್ ಲೈನ್ ಗಳನ್ನೂ ತೆಗೆದುಕೊಂಡಳು ಆ ಯುವತಿ. ಗೆಲುವಿನ ಮೊತ್ತ ಐದು ಕೋಟಿ ಆಯಿತು. ಆ ಐದು ಕೋಟಿಯ ಪ್ರಶ್ನೆಗೂ ಆ ಯುವತಿ ಕೊಟ್ಟ ಉತ್ತರ `ಗಲತ್ ಆಗಿರಲಿಲ್ಲ. ಸರಿಯಾಗಿಯೇ ಇತ್ತು ಉತ್ತರ. ಮುಂದಿನದು.. ಏಳು ಕೋಟಿ ರೂಪಾಯಿ ಪ್ರಶ್ನೆ.

ಕೊನೆಯ ಪ್ರಶ್ನೆ.

ಅಮಿತಾಭ್ ಬಚ್ಚನ್ ಕೇಳಿದರು: 'ನೀವು ಏಳು ಕೋಟಿ ರೂಪಾಯಿ ಗಳಿಸುವ ಹಂತಕ್ಕೆ ಬಂದಿದ್ದೀರಿ. ಈ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟರೆ ಏಳು ಕೋಟಿ ರೂಪಾಯಿ ನಿಮ್ಮದಾಗುತ್ತದೆ. ಏಳು ಕೋಟಿಯನ್ನು ಗಳಿಸಿದ ಪ್ರಥಮರಾಗುತ್ತೀರಿ ನೀವು.. ಹೇಳಿ.. ನೀವು ಪಡೆಯಲಿರುವ ಏಳು ಕೋಟಿ ರೂಪಾಯಿಗಳನ್ನು ಯಾವ ಉದ್ದೇಶಕ್ಕೆ ಬಳಸಬೇಕು ಎಂದುಕೊಂಡಿದ್ದೀರಿ?'

ಆ ಯುವತಿ ಕ್ಷಣವೂ ವಿಳಂಬಿಸದೆ ಹೇಳಿದಳು: 'ಇತ್ತೀಚೆಗೆ ಇಂಥಲ್ಲಿ ರೈಲು ಅಪಘಾತ ಆಯಿತಲ್ಲಾ.. ನೂರಾರು ಜನ ಆ ಅಪಘಾತದಲ್ಲಿ ಸತ್ತರು. ಕೆಲವರು ಬದುಕಿ ಉಳಿದರು. ಅವರಲ್ಲಿ ಹಲವರು ಅಂಗವಿಕಲರಾದರು. ಅಂಥವರಲ್ಲಿ ನಮ್ಮ ನಾಡಿನ..ಅಂದರೆ ಕರ್ನಾಟಕದ ತಿರುಬೋಕಿ ಎನ್ನುವವರೊಬ್ಬರು. ಪಾಪ ಅವರು ಆ ಅಪಘಾತದಿಂದಾಗಿ ತಮ್ಮ ಬಲಗಾಲನ್ನು ಕಳೆದು ಕೊಳ್ಳಬೇಕಾಯಿತು.ಅವರಿಗೆ ತಂದೆ ಇಲ್ಲ.ಇವರ ಎಳೆಯ ವಯಸ್ಸಿನಲ್ಲಿಯೇ ತಂದೆ ತೀರಿಕೊಂಡರಂತೆ. ಆ ತಿರುಬೋಕಿ ಎನ್ನುವವರ ತಾಯಿ ಪ್ರೈಮರಿ ಸ್ಕೂಲ್ ಟೀಚರ್. ಮಗ ಹೆಸರಿಗನ್ವಯ ತಿರುಬೋಕಿ. ಅಂದರೆ ಸದಾ ಸಂಚಾರಿ. ತನ್ನ ಮಗನ ಚಿಕಿತ್ಸೆಯ ಸಲುವಾಗಿ ಹಣದ ನೆರವು ನೀಡಿ ಎಂದು ಆ ಟೀಚರ್ ಟಿ.ವಿ.ಯ ಮೂಲಕ ಮನವಿ ಮಾಡಿಕೊಂಡಿದ್ದಾರೆ. ತಾವೂ ಅದನ್ನು ನೋಡಿರಬಹುದು ಸರ್. ಆ ತಿರುಬೋಕಿಯವರ ಚಿಕಿತ್ಸೆಗಾಗಿ ನಾನು ಗೆಲ್ಲುವುದರಲ್ಲಿ ಕೆಲವು ಮೊತ್ತವನ್ನು ನೀಡಬೇಕೆಂದುಕೊಂಡಿದ್ದೇನೆ..'

'ಗುಡ್..ಗುಡ್..' ಹೇಳಿದರು ಅಮಿತಾಭ್ ಜೀ.

'ಇಲ್ಲಿ ಬಾರೇ.. ನೋಡು.. ಟಿ.ವಿ.ಯಲ್ಲಿ ಏನು ಬರುತ್ತಾ ಇದೆ' ಅಂತ ನಾನು ನನ್ನ ಹೆಂಡತಿಯನ್ನು ಕರೆದು ಹೇಳಿದೆ.

ಇನ್ನೇನು ಬರುತ್ತದೆ..ನೀವು ನೋಡುತ್ತಿರುವುದು ಕೌನ್ ಬನೇಗಾ.. ತಾನೇ. ಯೆ ಗಲತ್ ಹೈ ಎನ್ನುತ್ತಾರೆ ಅಮಿತಾಭ್. ಹಾಟ್ ಸೀಟ್ ಇಳಿದು ಹೋಗುವವರೊಂದಿಗೆ ಒಂದು ಫೋಟೋ ತೆಗೆಸಿಕೊಳ್ಳುತ್ತಾರೆ. ಮತ್ತೆ.. ಮುಂದಿನದು ಫಾಸ್ಟೆಸ್ಟ್ ಫಿಂಗರ್ ಪ್ರಶ್ನೆ ತಾನೇ.. ಸರಿ ಉತ್ತರ ಕೊಡುವ ಇನ್ನೊಬ್ಬರ ಆಯ್ಕೆ. ಅವನು ಅಥವಾ ಅವಳು ಅಮಿತಾಭ್‌ರ ಕಾಲಿಗೆ ಬೀಳುವುದು; ಇವರು ಅವನನ್ನು, ಅವಳನ್ನು ತಡೆದು ಭುಜ ಹಿಡಿದು ಮೇಲಕ್ಕೆ ಎತ್ತುವುದು.. ಅವರ ಬಗ್ಗೆ ಒಂದು ವೀಡಿಯೊ..ಮತ್ತೇನು? ಎಂದಳು ನನ್ನಾಕೆ.

'ಅದಲ್ಲಾ ಕಣೇ..ನಮ್ಮ ತಿರುಬೋಕಿಯ ವಿಚಾರ ಬಂದಿದೆ, ಬಾ'ಎಂದೆ ನಾನು.

ನನ್ನಾಕೆ ಬಂದು ನನ್ನ ಪಕ್ಕದಲ್ಲಿ ಆಸೀನಳಾದಳು.

ಟಿ.ವಿ.ವೀಕ್ಷಣೆ ಮುಂದುವರಿಯಿತು.

'ಚಿಕಿತ್ಸೆಗೆ ಅಷ್ಟೆಲ್ಲಾ ಹಣ ಬೇಕಾಗುವುದಿಲ್ಲ ಅಲ್ಲವೇ.. ಒಂದೆರಡು ಲಕ್ಷ ಸಾಕಾದೀತು. ಮತ್ತೆ ಅಂದರು ಅಮಿತಾಭ್‌ಜೀ.

'ಹೌದು ಸರ್..ಚಿಕಿತ್ಸೆಗೆ ಒಂದೆರಡು ಲಕ್ಷ ಸಾಕಾಗಬಹುದು.. ಉಳಿದುದರಲ್ಲಿ.. ಆ ತಿರುಬೋಕಿ ಅವರಿಗೆ ನಡೆದಾಡಲಂತೂ ಸಾಧ್ಯವಾಗುವುದಿಲ್ಲವಲ್ಲಾ. ಒಂದೆಡೆ ಕುಳಿತು ಕೆಲಸ ಪಲಸ ಮಾಡಲು ಅನುಕೂಲ ಆಗುವಂತೆ ಒಂದು ಅಂಗಡಿ ತೆರೆಯಲು ಹಣ ಕೊಡುತ್ತೇನೆ. ಮತ್ತೇ.. ಅವರು ಈಗ ವಾಸಿಸುತ್ತಿರುವ ಮನೆ ಚಿಕ್ಕದು. ಟಿ.ವಿ.ಯಲ್ಲಿ ತೋರಿಸಿದ್ದಾರಲ್ಲಾ.. ಅದು ಅವರ ಅಪ್ಪ ಕಟ್ಟಿಸಿದ್ದ ಮನೆಯಂತೆ. ಆ ಮನೆಯನ್ನು ದೊಡ್ಡದಾಗಿಸಲು ಮತ್ತೆ 'ಕೆಲವು ಲಕ್ಷ ವಿನಿಯೋಗಿಸಿ ಅಂತ ಅವರಿಗೆ ಕೊಡಬೇಕು ಅಂದುಕೊಂಡಿದ್ದೇನೆ. ತಾನು ಕಾಲು ಕಳೆದುಕೊಂಡೆ. ದೇಶ ಸುತ್ತುವುದು ಇನ್ನು ತನ್ನಿಂದ ಸಾಧ್ಯ ಆಗದು ಎನ್ನುವ ಕೊರಗು ಅವರನ್ನು ಬಾಧಿಸುವುದು ಸಹಜ. ಆ ಕೊರಗನ್ನು ನಿವಾರಿಸಲು.. ಗೇರು ಪಾರು ಇಲ್ಲದ.. ಕುಂಟರು ಎಷ್ಟೇ ದೂರವಾದರೂ ಡ್ರೈವ್ ಮಾಡಬಹುದಾದ ವಾಹನಗಳು ಬಂದಿವೆಯಲ್ಲಾ ಸರ್.. ಮಾರುಕಟ್ಟೆಗೆ.. ಅಂಥ ಒಂದು ವಾಹನವನ್ನು ಕೊಂಡುಕೊಳ್ಳಲು ಹಣ ನೀಡುತ್ತೇನೆ. ಮತ್ತೆ..ಮತ್ತೇ..' ತುಸು ತಡೆದಳು ಆ ಯುವತಿ.

'ಮತ್ತೆ..ಮತ್ತೇ..ಹೇಳಿ..' ಅಂದರು ಅಮಿತಾಭ್ ಬಚ್ಚನ್ ಆ ಕೌನ್ ಬನೇಗಾ ಕರೋಡ್‌ಪತಿಯ ಆ್ಯಂಕರ್.

'ನಮ್ಮ ಮದುವೆಗೆ ವಿನಿಯೋಗಿಸುತ್ತೇನೆ' ಎಂದಳು ಆ ಯುವತಿ.

'ಫೈನ್..ಫೈನ್.. ಶ್ಲಾಘಿಸಿದ ಅಮಿತಾಭ್‌ಜೀ'

'ಯಾರೊಂದಿಗೆ ನಿಮ್ಮ ಮದುವೆ?' ಕೇಳಿದರು.

'ಇನ್ ಯಾರೊಂದಿಗೆ? ಅವರು, ಅವರ ತಾಯಿ ಒಪ್ಪಿದರೆ ಆ ತಿರುಬೋಕಿಯವರೊಂದಿಗೆ' ತುಸು ನಾಚಿ ಅಂದಳು ಆ ಯುವತಿ.

'ಮಗನ ಬಲಗಾಲು ಹೋದರೇನಂತೆ.. ನಮ್ಮ ಅನುಸೂಯಾಳಿಗೆ ಒಳ್ಳೆಯ ಸೊಸೆ ಸಿಕ್ಕಿದಳು.. ಹೊಸ ಮನೆಯೂ ಆಗುತ್ತದೆ ಅಂತಾಯಿತು. ಜೊತೆಗೆ ಅಂಗಡಿ.. ಕೋಟಿಗಟ್ಟಲೆ ದುಡ್ಡು.. ಸಂಚಾರಕ್ಕೆ ಆಟೋಮ್ಯಾಟಿಕ್ ವಾಹನ.. ಖುಷಿಯಿಂದ ಅಂದಳು ನನ್ನ ಮಡದಿ.

***

ತಿರುಬೋಕಿಯ ತಿರುಗಾಟ ನಿಂತಿಲ್ಲ.

ಆದರೆ..ಈಗ ಆತ ಒಬ್ಬನೇ ತಿರುಗಲು ಹೋಗುವುದಿಲ್ಲ.. ಅವನ ಜೊತೆ ಅವನ ಹೆಂಡತಿ ಕನ್ನಡನಾಡಿನ ಗೌರೀಬಿದನೂರಿನ ಸುಷ್ಮಾ ಕೂಡಾ ಹೋಗುತ್ತಾಳೆ. ಅದೂ ಅವರೇ ಕೊಂಡಿರುವ, ಆಟೋಮ್ಯಾಟಿಕ್ ಗೇರು ಪಾರು ವಿಶೇಷ ವ್ಯವಸ್ಥೆ ಹೊಂದಿರುವ ವಾಹನದಲ್ಲಿ.

ಅನುಸೂಯಾ ಈಗ ಟೀಚರ್ ಕೆಲಸ ಬಿಟ್ಟಿದ್ದಾಳೆ. ಮಗ ಸೊಸೆ ಟ್ಯೂರ್‌ಗೆ ಹೋದಾಗ ಅಂಗಡಿ ನೋಡಿಕೊಳ್ಳುವ ಕೆಲಸ ಇವಳದೇ. ಕೆಲವು ಬಾರಿ ತಾನೂ ಮಗ ಸೊಸೆಯೊಂದಿಗೆ ಹೋಗಿ ಹತ್ತೂರು ನೋಡಿ ಬಂದಿದ್ದಾಳೆ ಅನುಸೂಯಾ. ದಿನವೂ ನಮ್ಮ ಮನೆಗೆ ಬಂದು ಹೋಗುವುದನ್ನು ಮಾತ್ರ ನಿಲ್ಲಿಸಿಲ್ಲ ಅನುಸೂಯಾ. ಅನುಸೂಯಾ ಈಗ ಮೊಮ್ಮಗನ ನಿರೀಕ್ಷೆಯಲ್ಲಿದ್ದಾಳೆ!